ಕರ್ನಾಟಕ ವಿಧಾನಸಭೆ

ಮಂಗಳವಾರ 6ನೇ ಆಗಸ್ಟ್ 2002 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ : 11.00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪರವರು) ಪೀಠವನ್ನು ಅಲಂಕರಿಸಿದ್ದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ದಿನಾಂಕ 15-8-2002ರಂದು ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸುವ ವಿಚಾರದಲ್ಲಿ ಸರ್ಕಾರ 'ಜ್ಞಾಪನಾ ಪತ್ರ ಹೊರಡಿಸುವ ಬಗ್ಗೆ.

+ ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ಅದರಲ್ಲೂ ನಮ್ಮ ಗೃಹ ಇಲಾಖೆಯಲ್ಲಿ ಏನಾಗುತ್ತಿದೆಯೆಂಬುದು ನಮಗೆ ಗೊತ್ತಾಗುತ್ತಿಲ್ಲ. ಒಂದು ವಿಷಯವನ್ನು ಇಲ್ಲಿ ಪ್ರಸ್ತಾಪಿಸಬೇಕೆಂದು ನಾವು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ಇವತ್ತು ಗೃಹ ಇಲಾಖೆಯ ಗುಪ್ತ ವಾರ್ತಾಧಿಕಾರಿಗಳು ಎಲ್ಲಾ ಜಿಲ್ಲೆಗಳ ಎಸ್‌ಪಿಗಳಿಗೆ, ಮಹಾನಗರಗಳ ಪೋಲೀಸ್ ಕಮೀಷನರ್‌ಗಳಿಗೆ ಒಂದು ಜ್ಞಾಪನ ಪತ್ರವನ್ನು ಏನು ಕಳುಹಿಸಿದ್ದಾರೆ ಅದನ್ನು ನೋಡಿದರೆ ರಾಜ್ಯದಲ್ಲಿ ಇವತ್ತೇನು ನಡೆಯುತ್ತಿದೆ, ಗೃಹ ಇಲಾಖೆ ಯಾವರೀತಿ ಕೆಲಸ ಮಾಡುತ್ತಿದೆ, ಯಾವ್ಯಾವ ಸಂಘಸಂಸ್ಥೆಗಳ ಬಗ್ಗೆ ಯಾವರೀತಿ ಗುಮಾನಿ ವ್ಯಕ್ತಪಡಿಸುತ್ತಿದ್ದಾರೆ ಅಥವಾ ಇಲ್ಲೇನು ಒಂದು ವ್ಯವಸ್ಥಿತವಾದ ಆಡಳಿತ ಇದೆಯೋ, ಇಲ್ಲವೋ ಎನ್ನುವಂತಹ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಇಲ್ಲಿ ನಾನು ಪ್ರಾಮುಖ್ಯವಾದ ಒಂದು ವಿಷಯವನ್ನು ಪ್ರಸ್ತಾಪಿಸಲು ಬಯಸುತ್ತಿದ್ದೇನೆ. ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ಇವರ ಪರವಾಗಿ ರಾಜ್ಯ ಗುಪ್ತವಾರ್ತೆ ಇಲಾಖೆ ಒಂದು ಜ್ಞಾಪನ ಪತ್ರವನ್ನು ಕಳುಹಿಸಿದೆ. ಜುಲೈ 28ರಂದು ಇದನ್ನು ಕಳುಹಿಸಲಾಗಿದೆ. ನಿನ್ನೆ ಇದು ನಮ್ಮ ಕೈಗೆ ಸಿಕ್ಕಿತು. ಇದರಲ್ಲಿನ ವಿಷಯವನ್ನು ನೋಡಿದರೆ ಬಹುಶಃ ಯಾವರೀತಿ ರಾಜ್ಯ ಸರ್ಕಾರದ ಆಡಳಿತ ವ್ಯವಸ್ಥೆ ನಡೆಯುತ್ತಿದೆ, ಇವತ್ತು ದೇಶಕ್ಕಾಗಿ ಯಾರು ತ್ಯಾಗ ಮಾಡಿದ್ದಾರೆ, ದೇಶಭಕ್ತಿ ಬೆಳೆಸುವಂತಹ ಕೆಲಸ ಮಾಡುತ್ತಿರುವ, ಪ್ರಜ್ವಲ ದೇಶಾಭಿಮಾನಿಗಳು ಇರುವ ಆ ಸಂಘ ಸಂಸ್ಥೆಗಳ ಮೇಲೆ ಇವತ್ತೇನು ಗಮಾನಿ ಕೂರಿಸುವಂಥ ಕೆಲಸವನ್ನು, ಅವರು ಕಾನೂನು ವಿರೋಧಿಗಳು ಎಂದು ಹೇಳುವಂಥ ಕೆಲಸವನ್ನು ಈ ಜ್ಞಾಪನಾ ಪತ್ರದಲ್ಲಿ ಮಾಡಿದ್ದಾರೆ, ಇದನ್ನು ನೋಡಿದರೆ ಒಂದು ಅಕ್ಷಮ್ಯ ಅಪರಾಧವನ್ನೇ ಮಾಡುತ್ತಿದ್ದಾರೆ. ಇದರಲ್ಲಿರುವುದನ್ನು ನಾನು ತಮ್ಮ ಗಮನಕ್ಕೆ ತೆಗೆದುಕೊಂಡು ಬರುತ್ತೇನೆ. ಇದು ಬಹಳ ಗಂಭೀರವಾದಂಥ ವಿಷಯ. ಇಲ್ಲಿ 'ಜ್ಞಾಪನಾ' ಎಂದು ಹೇಳಿ ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೋಲೀಸ್‌ನವರು ಬರೆದಿದ್ದಾರೆ. "ವಿಷಯ ದಿನಾಂಕ 15-8-2002ರಂದು ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸುವ ಬಗ್ಗೆ. ಸ್ವಾತಂತ್ರ್ಯ ದಿನಾಚರಣೆಯನ್ನು ದಿನಾಂಕ 15-8-2002ರಂದು ರಾಜ್ಯಾದ್ಯಂತ ಆಚರಿಸಲಾಗುತ್ತಿದ್ದು, ಬೆಳಿಗ್ಗೆ ಧ್ವಜಾರೋಹಣ ಮತ್ತು ಸಂಜೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತದೆ. ಸಾಮಾನ್ಯ ಜೀವನ ವೆಚ್ಚದಲ್ಲಿ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆ, ವಿದ್ಯುಚ್ಛಕ್ತಿ ದರ ಬಸ್ ಪ್ರಯಾಣ ದರ ಮತ್ತು ನೀರಿನ ದರಗಳ ಏರಿಕೆ, ವಿವಿಧ ರಾಜಕೀಯ ಪಕ್ಷಗಳ ಪರಸ್ಪರ ವೈಷಮ್ಯ, ರೈತರಲ್ಲಿ ಹಾಗೂ ವಿದ್ಯಾರ್ಥಿಗಳಲ್ಲಿ

ಇರುವ ಅಶಾಂತಿ ಇವೇ ಮುಂತಾದ ಕಾರಣಗಳಿಂದ ಜನ ಸಾಮಾನ್ಯರಲ್ಲಿ ಅಸಮಾಧಾನ ಇರಬಹುದು. ಈ ಸಂದರ್ಭವನ್ನು ಸಮಾಜಘಾತುಕ ಶಕ್ತಿಗಳು ದುರುಪಯೋಗಪಡಿಸಿಕೊಂಡು ಕಾನೂನು ಮತ್ತು ಸುವ್ಯವಸ್ಥೆಯಲ್ಲಿ ಭಂಗ ಮಾಡುವಂತಹ ಶಂಕೆ ಇರುತ್ತದೆ. ಇದಲ್ಲದೆ ಕರ್ನಾಟಕ-ಮಹಾರಾಷ್ಟ್ರ ಗಡಿ ಸಮಸ್ಯೆಯ ವಿವಾದ". ಈ ವಿವಾದ ಈಗ ಎಲ್ಲಿದೆಯೋ ನನಗೆ ಗೊತ್ತಿಲ್ಲ. "ರಾಜ್ಯದ ಕೆಲವು ಪ್ರದೇಶಗಳಲ್ಲಿ ಮುಂಗಾರು ಮಳೆಯ ವಿಫಲತೆಯಿಂದಾಗಿ ಬರಗಾಲ ಪರಿಸ್ಥಿತಿ ಉಂಟಾಗಿರುವುದು, ಕೃಷಿ ಉತ್ಪನ್ನಗಳಿಗೆ ಸರಿಯಾದ ಬೆಲೆ ಸಿಗದೇ ಇರುವುದು ಹಾಗೂ ಬೆಳೆ ಹಾನಿಯಿಂದಾಗಿ ಕೆಲವು ರೈತರು ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳು ಇತ್ಯಾದಿ; ಇವುಗಳನ್ನು ಗಮನಿಸುವುದು ಇಂದು ಅವಶ್ಯಕವಾಗಿರುತ್ತದೆ. ಇದು ಬಹಳ ಮುಖ್ಯ." ಇವುಗಳಲ್ಲದೆ ಆರ್.ಎಸ್.ಎಸ್., ಮುಸ್ಲಿಂ ಲೀಗ್, ಎಲ್.ಟಿ.ಟಿ.ಇ., ಜಿ.ಕೆ.ಎಲ್.ಎಫ್, ಪಿ.ಡಬ್ಲ್ಯೂ.ಜಿ., ಪ್ರಗತಿಪರ ವಿದ್ಯಾರ್ಥಿ ಕೇಂದ್ರ ಪಕ್ಷಗಳು ಹಾಗೂ ದಲಿತ ಸಂಘರ್ಷ ಸಮಿತಿ ಹಾಗೂ ಮತ್ತಿತರ ಸಂಘ ಸಂಸ್ಥೆಗಳಿಂದ ವಿವಿಧ ರೀತಿಯ ಕಾನೂನುಬಾಹಿರ ಚಟುವಟಿಕೆಗಳನ್ನು ನಡೆಸುವ ಸಾಧ್ಯತೆಗಳು ಹೆಚ್ಚಾಗಿರುತ್ತದೆ. "ಇದು ಬಹಳ ಮುಖ್ಯ ಸನ್ಮಾನ್ಯ ಅಧ್ಯಕ್ಷರೇ." ಈ ಹಿನ್ನೆಲೆಯಲ್ಲಿ ಮುಂಚಿತವಾಗಿ ಅಧಿಕ ಮಾಹಿತಿಗಳನ್ನು ಪಡೆದು ಸಾಕಷ್ಟು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವುದು ಅತೀ ಅವಶ್ಯಕವಾಗಿರುತ್ತದೆ." ಸ್ವಾತಂತ್ರ್ಯ ದಿನಾಚರಣೆಯು ಮುಗಿದನಂತರ, ಆ ಬಗ್ಗೆ ಒಂದು ವರದಿಯನ್ನು ತಪ್ಪದೇ ಈ ಕಛೇರಿಗೆ ಕಳುಹಿಸಿಕೊಡಲು ಕೋರಲಾಗಿದೆ." ಸನ್ಮಾನ್ಯ ಅಧ್ಯಕ್ಷೇ, ಈ ಒಂದು ಜ್ಞಾಪನಾ ಪತ್ರದ ಬಗ್ಗೆ ಇವತ್ತು ಇದನ್ನು ನಾನು ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆ. ಇವತ್ತು ಆರ್.ಎಸ್.ಎಸ್. ಬಗ್ಗೆ ಆಮೇಲೆ ದಲಿತ ಸಂಘರ್ಷ ಸಮಿತಿ ಬಗ್ಗೆ ಈ ರೀತಿ ಕಾನೂನುಬಾಹಿರ ಚಟುವಟಿಕೆಗಳನ್ನು ನಡೆಸುತ್ತವೆ ಎಂದು ಹೇಳಿರುವುದನ್ನು ಒಪ್ಪಲಿಕ್ಕೆ ಸಾಧ್ಯವಿಲ್ಲ. ಇವತ್ತು ಜಿ.ಕೆ.ಎಲ್.ಎಫ್ ಇರಬಹುದು, ಎಲ್‌ಟಿಟಿಇ ಇರಬಹುದು. ಇಂಥ ಉಗ್ರಗಾಮಿ ಸಂಘಟನೆಗಳು, ಯಾರು ಕಾನೂನುಬಾಹಿರ ಚಟುವಟಿಕೆಗಳನ್ನು ಮಾಡುತ್ತಾರೆ,..

ಅಧ್ಯಕ್ಷರು : ಈಗ ತಾವು ಹೇಳಿದ್ದು ಕೇಳಿದೆ. ತಮ್ಮ ಪತ್ರವನ್ನೂ ಓದಿದ್ದೇನೆ. ಅದನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇನೆ. I will allow it. But, I will allow after the lunch hour.

ಶ್ರೀ ಜಗದೀಶ್ ಶೆಟ್ಟರ್ : ಇದು ಬಹಳ ಗಂಭೀರವಾದುಂಥ ವಿಷಯ. ಬಹಳ ಸೀರಿಯಸ್ ಆದಂಥ ವಿಚಾರ. ಇವತ್ತು ಆರ್.ಎಸ್.ಎಸ್.ಬಗ್ಗೆ.....

(ಗೊಂದಲ)

Mr. Speaker : I will allow after the lunch hour. I am allowing you. ಅಲೋನೇ ಮಾಡಲಿಲ್ಲವೆಂದರೆ ಅದು ಬೇರೆ ವಿಷಯ. ಅಲೋ ಮಾಡುತ್ತೇನೆ ಎಂದು ಹೇಳಿದಮೇಲೂ ಈ ರೀತಿ ಮಾಡಿದರೆ ಹೇಗೆ?

ಶ್ರೀ ಜಗದೀಶ್ ಶೆಟ್ಟರ್ : ಇವರು ರಾಷ್ಟ್ರ ವಿರೋಧಿಗಳು ಹೇಗೆ? ಇವರು ಹೇಗೆ ಉಗ್ರಗಾಮಿಗಳು?

Mr. Speaker : I will allow after the lunch hour.

ಶ್ರೀ ಜಗದೀಶ್ ಶೆಟ್ಟರ್ : ದೇಶಭಕ್ತಿ ಬೆಳೆಸುವಂತಹ ಕೆಲಸವನ್ನು ಇವತ್ತು ಆರ್.ಎಸ್.ಎಸ್. ಮಾಡುತ್ತಿದೆ. ಇವತ್ತು ದೇಶವನ್ನು ಕಟ್ಟತಕ್ಕಂಥ ಕೆಲಸವನ್ನು ಆರ್.ಎಸ್.ಎಸ್.

ಮಾಡುತ್ತಾ ಇದೆ. ದೇಶಕ್ಕಾಗಿ ಬಲಿದಾನ ಮಾಡುವಂಥ ಕೆಲಸವನ್ನು ಇವತ್ತು ಆರ್.ಎಸ್.ಎಸ್. ಮಾಡುತ್ತಿದೆ.

(ಗೊಂದಲ)

ಅಧ್ಯಕ್ಷರು : ಆಮೇಲೆ ನೀವು ಹೇಳಿ. ತಾವು ಹೇಳಿದ್ದು ನಾನು ಕೇಳಿ ಆದಮೇಲೆ. ನೀವು ನಾನು ಹೇಳಿದ್ದು ಕೇಳಬೇಕಲ್ಲವೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಬಿಸಿನೆಸ್ ನಡೆಯಬೇಕೆನ್ನುವ ದಿಸೆಯಿಂದ ನಾವು ಇವತ್ತು ಸಹಕಾರವನ್ನು ತಮಗೆ ಕೊಟ್ಟುಕೊಂಡು ಬಂದಿದ್ದೇವೆ.

ಅಧ್ಯಕ್ಷರು : ಇಲ್ಲ ಎಂದು ಯಾರು ಹೇಳಿದ್ದು? ಸಹಕಾರ ಕೊಡುತ್ತಿದ್ದೀರಿ ಎಂದು ನಾನು ಹೇಳುತ್ತಿದ್ದೇನಲ್ಲಾ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಎಲ್ಲಾ ಬಿಸಿನೆಸ್‌ನ್ನು ಬದಿಗೊತ್ತಿ ಈ ಒಂದು ವಿಷಯವನ್ನು ನಾವು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತಿದ್ದೇವೆ. ಏಕೆಂದರೆ ಇದು ಬಹಳ ಗಂಭೀರವಾದಂಥ ವಿಷಯ. ಇವತ್ತು ಯಾರು ದೇಶವನ್ನು ಕಟ್ಟುವಂಥ ಒಂದು ಕೆಲಸವನ್ನು ಮಾಡುತ್ತಾರೆ, ಅಂಥ ಸಂಘಟನೆಗೆ ಕಾನೂನುಬಾಹಿರ ಎಂದು ಹೇಳಿದರೆ ಇದಕ್ಕೇನು ಆಧಾರ ಇದೆ?

(ಗೊಂದಲ)

ಅಧ್ಯಕ್ಷರು : ನೀವು ಹೇಳಿದ್ದು ಮಾತ್ರ ನಾನು ಕೇಳಬೇಕು, ನಾನು ಹೇಳಿದ್ದು ನೀವು ಕೇಳಕೂಡದೇ?

ಶ್ರೀ ಜಗದೀಶ್ ಶೆಟ್ಟರ್ : ಪ್ರಥಮ ಪ್ರಾಶಸ್ತ್ಯವಾಗಿ ಇದನ್ನು ಪ್ರಸ್ತಾಪ ಮಾಡಬೇಕು.

ಅಧ್ಯಕ್ಷರು : ಆಯಿತು. ಬಿಡಿ. But, I have not yet alowed you. I am allowing you after the lunch hour.

(ಗೊಂದಲ)

ಅಧ್ಯಕ್ಷರು : ಎಲ್ಲರೂ ಮಾತನಾಡಿದರೆ ಬರೆದುಕೊಳ್ಳಬೇಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಇದನ್ನು ನಿಲುವಳಿ ಸೂಚನೆಯ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಸರ್ಕಾರದಿಂದ ವಿಶೇಷವಾಗಿ ಗುಪ್ತವಾರ್ತೆ ಇಲಾಖೆಯ ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಈ ವಿಚಾರವನ್ನು ಯಾವ ಉದ್ದೇಶದಿಂದ ಕಳುಹಿಸಿದ್ದಾರೆಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಡಿಎಸ್ಎಸ್ ಬಗ್ಗೆ ಇರಬಹುದು, ಆರ್ಎಸ್ಎಸ್ ಬಗ್ಗೆ ಇರಬಹುದು, ಈ ಸರ್ಕಾರದ ಬಗ್ಗೆ ನಾವು ಕೆಲವು ಮಾಹಿತಿಗಳನ್ನು ತೆಗೆದುಕೊಳ್ಳಬೇಕಗಾಗಿದೆ. ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವುದಿಲ್ಲ. ತಾವು ದಯವಿಟ್ಟು ಯಾವುದಾದರೂ ಒಂದು ರೂಪದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಅವರು ಕೆಲವು ಮಾಹಿತಿಗಳನ್ನು ಸಂಗ್ರಹಿಸಬೇಕಲ್ಲಾ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅವರು ಸಂಗ್ರಹಿಸಿದ್ದಾರೆ.

(ಗೊಂದಲ)

ಅಧ್ಯಕ್ಷರು : ಹೌಸ್ ಲೀಡರ್ ಉತ್ತರ ಹೇಳುತ್ತಾರೆ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಮಧ್ಯಾಹ್ನದ ಮೇಲೆ ಇದನ್ನು ತೆಗೆದುಕೊಳ್ಳಬಹುದು. 15 ನಿಮಿಷವೋ, 20 ನಿಮಿಷವೋ ಅರ್ಧ ಗಂಟೆಯೋ ತೆಗೆದುಕೊಳ್ಳಬಹುದು. ಅಷ್ಟರಲ್ಲಿ ನಾವು ಮಾಹಿತಿಗಳನ್ನು ಸಂಗ್ರಹಿಸುತ್ತೇವೆ. ಹಿಂದೆ ಏನೇನು ಕಳುಹಿಸಿದ್ದರು? ಇವತ್ತೇನು ಕಳುಹಿಸಿದ್ದೇವೆ ಎಂದು ನಾವು ಮಾಹಿತಿ ಸಂಗ್ರಹಿಸುತ್ತಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಇದನ್ನು 28ನೇ ತಾರೀಖಿನ ದಿವಸ ಕಳುಹಿಸಿರುವುದು. ನಾವು ಮೊದಲು ಪ್ರಸ್ತಾಪ ಮಾಡುತ್ತೇವೆ. ಅವರು ಮಾಹಿತಿ ಸಂಗ್ರಹ ಮಾಡಲಿ. ಆನಂತರ ಉತ್ತರ ಕೊಡಲಿ. ಇದು ಬಹಳ ಗಂಭೀರವಾದಂಥ ವಿಷಯ.

(ಗೊಂದಲ)

Mr. Speaker : Don't take down. Don't take down. ನಾನು ಯಾರಿಗೆಪರ್ಮಿಟ್ ಮಾಡುತ್ತೇನೋ ಅವರು ಹೇಳಿದ್ದು ಮಾತ್ರ ಬರೆದುಕೊಳ್ಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಈ ಗುಪ್ತವಾರ್ತೆ ಇಲಾಖೆ ಕೂಡ ಮುಖ್ಯಮಂತ್ರಿಗಳ ಅಧೀನದಲ್ಲಿ ಇರತಕ್ಕಂಥಾದ್ದು. ಅವರ ನಾಲೆಡ್ಜ್‌ಗೆ ಬರದೇ ಈ ರೀತಿಯ ಜ್ಞಾಪನಾ ಪತ್ರಗಳನ್ನು ಕಳುಹಿಸುತ್ತಾರೋ ಹೇಗೆ? ಇದರ ಬಗ್ಗೆ ಮಾಹಿತಿ ತೆಗೆದುಕೊಳ್ಳುವಂಥಾದ್ದು ಏನು ಇದೆ?

ಅಧ್ಯಕ್ಷರು : ಲಂಚ್ ಅವರ್ ಆದಮೇಲೆ ಅಲೋ ಮಾಡುತ್ತೇನೆ ಎಂದು ಹೇಳಿದ್ದೇನಲ್ಲಾ ಎರಡು ಗಂಟೆಯಲ್ಲೇನೂ ರಾಜ್ಯ ಬಿದ್ದು ಹೋಗುತ್ತದೆಯೇ?

(ಗೊಂದಲ)

Mr. Speaker : Don't take down.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೇ, ನಾವೇನೂ ಚರ್ಚೆ ಬೇಡ ಎಂದು ಹೇಳುತ್ತಿಲ್ಲ, ಚರ್ಚೆ ಮಾಡುವುದಕ್ಕೆ ಸಿದ್ಧರಿದ್ದೇವೆ. ಅವರೇನು ಪ್ರಶ್ನೆಯನ್ನು ಎತ್ತಿದ್ದಾರೆ, ಅದಕ್ಕೆ ಉತ್ತರ ಕೊಡುವುದಕ್ಕೆ ನಾವು ಸಮರ್ಥರಿದ್ದೇವೆ. ಉತ್ತರವನ್ನು ಕೊಡುತ್ತೇವೆ. ಆದರೆ ಈಗ ನಾವು ನಮ್ಮ ಅಜೆಂಡಾ ಪ್ರಕಾರ ಹೋಗೋಣ. ಅಜೆಂಡಾ ಮುಗಿದಮೇಲೆ ಬೇಕಾದರೆ ಅವರು ಇದನ್ನು ಮಧ್ಯಾಹ್ನದ ಮೇಲೆ ತೆಗೆದುಕೊಳ್ಳಲಿ. ನಾವು ಮಾಹಿತಿ ಸಂಗ್ರಹಿಸುತ್ತೇವೆ. ಎಲ್ಲಾ ಸರ್ಕಾರಿ ಆಫೀಸ್ಗಳನ್ನೂ ನಾವು ಹುಡುಕುತ್ತೇವೆ. ಇದೇನು ನಾವು ಹೊಸದಾಗಿ ಮಾಡಿದ್ದೇವೋ, ಹಿಂದೆಯೂ ಇತ್ತೋ? ಇವತ್ತೇ ಸೃಷ್ಟಿ ಮಾಡಿದ್ದೇವೆಯೇ ಅಥವಾ ಕೇಂದ್ರ ಸರ್ಕಾರದಲ್ಲಿ ಏನು ಪದ್ಧತಿ ಇದೆ? ಅದನ್ನೆಲ್ಲಾ ನೋಡಿಕೊಂಡು, ಅದರ ಬಗ್ಗೆ ಸಮರ್ಪಕವಾಗಿ ಮಧ್ಯಾಹ್ನದ ಮೇಲೆ ನಾವು ಉತ್ತರವನ್ನು ಕೊಡುತ್ತೇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ನಾವು ಈಗ ಚರ್ಚೆ ಪ್ರಾರಂಭ ಮಾಡುತ್ತೇವೆ. ಆಮೇಲೆ ಅವರು ಉತ್ತರ ಕೊಡಲಿ.

(ಗೊಂದಲ)

(ವಿರೋಧ ಪಕ್ಷದವರು ಧರಣಿ ನಡೆಸಲು ಬಾವಿಗೆ ಬಂದರು)

ಅಧ್ಯಕ್ಷರು : ಬರೇ ನೀವೇ ಮಾತನಾಡುತ್ತಿದ್ದರೆ ಹೇಗೆ?

ಶ್ರೀ ಎಸ್. ಸುರೇಶ್‌ಕುಮಾರ್ : ಸನ್ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಮಧ್ಯಾಹ್ನ ಆದ ಮೇಲೆ ಅದನ್ನು ತೆಗೆದುಕೊಳ್ಳೋಣ ಎಂದು ಹೇಳಿದ್ದಾರೆ. ನಾನು ಅದಕ್ಕೆ ವಿತ್ ಡ್ಯೂ-ರೆಸ್ಪೆಕ್ಟ್ ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುವುದು ಏನೆಂದರೆ, ಮಾನ್ಯ ಗೃಹ ಮಂತ್ರಿಗಳೂ ಇದ್ದಾರೆ, It will not require a long debate. Out and out it is a mischievous circular. ಅದಕ್ಕೋಸ್ಕರ ನೀವು ಇದೇನು ಡಿಬೇಟ್, ಮಾಹಿತಿ ಸಂಗ್ರಹ ಮಾಡುವುದು ಇದೆಲ್ಲಾ ಬೇಡ. It is a question of sentiments. ತಾವೇ ಏಳು ತಿಂಗಳುಗಳ ಹಿಂದೆ ಹೆಬ್ಬಾಳದಲ್ಲಿ ನಡೆದ ಶಿಬಿರದ ಸಿದ್ಧತೆ ಟೈಮಿಗೆ ಬಂದಿದ್ದೀರಿ. ನೀವು ನೋಡಿದ್ದೀರಿ, ಯಾವರೀತಿ ಆರ್‌ಎಸ್‌ಎಸ್ ಕೆಲಸ ಮಾಡುತ್ತದೆ ಎಂದು. ಆ ಹಿನ್ನೆಲೆಯಲ್ಲಿ, you just accept that it is a mischievours circular. How can you bracket RSS with JKLF? How can you bracket RSS with ITTE? Is it not a mischief?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಉತ್ತರ ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ನಾವು ಹೇಳಬಹುದು.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಚರ್ಚೆ ಆಗಲಿ, ನಾವು ಉತ್ತರ ಕೊಡುತ್ತೇವೆ.

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಗೃಹಮಂತ್ರಿಗಳು ಈ ಸಂಘಟನೆಗಳ ಬಗ್ಗೆ ಪೂರ್ತಿ ವಿಚಾರಗಳನ್ನು ಕೆಲವು ತಿಂಗಳ ಹಿಂದೆ ತಿಳಿದುಕೊಂಡಿದ್ದಾರೆ. ಇವರಿಗೆ ಈ ವಿಚಾರದ ಬಗ್ಗೆ ಪೂರ್ತಿ ಮಾಹಿತಿ ಇದೆ.

(ಗೊಂದಲ)

ಅಧ್ಯಕ್ಷರು : ಯಾರ ಆಫೀಸರ್‌ಗಳ ತಪ್ಪು, ಏನು ಎಂದು ವಿಚಾರ ಮಾಡಬೇಕು, ಅದ್ಕಕಾಗಿ ಮಾಹಿತಿ ಸಂಗ್ರಹಿಸಬೇಕಲ್ಲಾ.

ಶ್ರೀ ಡಿ.ವಿ. ಸದಾನಂದಗೌಡ : ಇವರು ಶಹಭಾಸ್‌ಗಿರಿ ಕೊಟ್ಟವರು, ಇವತ್ತು ಈ ರೀತಿ ಮಾತನಾಡುವುದಾದರೆ ಹೇಗೆ? ನಿನ್ನೆ ಮೊನ್ನೆ ಶಹಭಾಸ್‌ಗಿರಿ ಕೊಟ್ಟರಲ್ಲಾ, ಇವತ್ತೇಕೆ ಹೀಗೆ ಮಾತನಾಡುತ್ತಿದ್ದಾರೆ?

ಅಧ್ಯಕ್ಷರು : ಈಗ ನೀವು ಹೇಳಿದ್ದನ್ನು ನಾನು ಕೇಳಿದ್ದೇನೆ.

ಶ್ರೀ ಡಿ.ವಿ. ಸದಾನಂದಗೌಡ : ಎಲ್ಲಿ ಕೇಳಿದ್ದೀರಿ?

ಅಧ್ಯಕ್ಷರು : ಮಾನ್ಯ ಗೃಹ ಮಂತ್ರಿಗಳು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೂ ಮಾತನಾಡಿದ್ದಾರೆ, ಸ್ವಲ್ಪ ತಡೆಯಿರಿ.

ಶ್ರೀ ಎಸ್. ಸುರೇಶ್ ಕುಮಾರ್ : ಪೊಲೀಸ್ ಇಂಟೆಲಿಜೆನ್ಸ್‌ಗೆ ಇಂಟೆಲಿಜೆನ್ಸ್ ಕಡಿಮೆ. ಅವರಿಗೆ ಇಂಟೆಲಿಜೆನ್ಸ್ ಇಲ್ಲ. ಅದಕ್ಕೋಸ್ಕರ ಯಾವ್ಯಾವ ಸಂಘಟನೆಗಳನ್ನು ಯಾವ ಯಾವ ಸಂಘಟನೆ ಜೊತೆ ಬ್ರಾಕೆಟ್ ಮಾಡುವುದು ಎಂದು ಗೊತ್ತಿಲ್ಲದಿದ್ದರೆ?

ಅಧ್ಯಕ್ಷರು : ಆಯಿತು, ನಾನು ಮಾತನಾಡುವುದಕ್ಕೆ ಅವಕಾಶ ಕೊಡುತ್ತೀರಿ ತಾನೇ? ಒಂದು ನಿಮಿಷ ಸುಮ್ಮನೇ ಇರಿ.

ಶ್ರೀ ಡಿ.ವಿ. ಸದಾನಂದಗೌಡ : ನಾವು ಹೇಳುವುದನ್ನು ಕೇಳಿ ಆದಮೇಲೆ ತಾವು ಚರ್ಚೆಗೆ ಅವಕಾಶ ಮಾಡಿ ಕೊಡಿ. ಎರಡು ನಿಮಿಷ ಕೇಳಿ ಸಾರ್. ಇದು ಸುದೀರ್ಘವಾದಂತಹ ಚರ್ಚೆಗೆ ಅವಕಾಶವಾಗುತ್ತದೆ, ಆದರೆ ಅದರ ಅವಶ್ಯಕತೆ ಇಲ್ಲ.

ಅಧ್ಯಕ್ಷರು : ನಿಮ್ಮ ನಾಯಕರು ಹೇಳಿದರಲ್ಲಾ.

ಶ್ರೀ ಡಿ.ವಿ. ಸದಾನಂದಗೌಡ : ಈ ಬಗ್ಗೆ ಸುದೀರ್ಘವಾದಂತಹ ಚರ್ಚೆಯ ಅವಶ್ಯಕತೆ ಇಲ್ಲ. ಒಂದು ನಿಮಿಷ ನಾನು ಕೇಳುತ್ತೇನೆ. ಇದರಲ್ಲಿ ಸುದೀರ್ಘವಾದಂತಹ ಚರ್ಚೆಗೆ ಮತ್ತೊಂದಕ್ಕೆ ಅವಕಾಶ ಆಗುವಂತಹ ಅಗತ್ಯ ಇಲ್ಲ. ನಾನು ಹೇಳುವುದು ಏಕೆಂದರೆ ಆರ್ಎಸ್ಎಸ್ ನವರ ಬಗ್ಗೆ ಪೂರ್ತಿ ವಿಚಾರಗಳನ್ನು ಹಾಗೂ ವಿವರಗಳನ್ನು ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಪೋಲೀಸ್ ಇಲಾಖೆಯಿಂದ ಕೇವಲ ಏಳು ತಿಂಗಳಲ್ಲಿ ತೆಗೆದುಕೊಂಡಿದ್ದಾರೆ, ಎಲ್ಲರೂ ಶಹಭಾಸ್‌ಗಿರಿ ಕೊಟ್ಟಿದ್ದಾರೆ. ಇಂತಹ ಒಂದು ದೇಶಪ್ರೇಮಿ ಸಂಘಟನೆ, ಇಂತಹ ಒಂದು ಶಿಸ್ತುಬದ್ಧ ಸಂಘಟನೆ ಬೇರೆ ಇನ್ನೊಂದು ಇಲ್ಲ ಎಂದು ಹೇಳಿದ್ದಕ್ಕೆ ಅವರೇ ಮೊನ್ನೆ ಒಪ್ಪಿಕೊಂಡಿದ್ದಾರೆ.

ಅಧ್ಯಕ್ಷರು : ನಾನು ಅಲೋ ಮಾಡುತ್ತೇನೆ, ಆವಾಗ ಡೀಟೇಲ್ಸ್ ಹೇಳಿ; Not at this stage, We will take it up after lunch.

ಶ್ರೀ ಡಿ.ವಿ. ಸದಾನಂದಗೌಡ : ಒಂದು ವೇಳೆ ಆ ಅಧಿಕಾರಿ ತಪ್ಪು ಮಾಡಿದ್ದರೆ, ಆ ಅಧಿಕಾರಿ 'ತಪ್ಪು ಮಾಡಿದ್ದೇವೆ'ಂದು ಹೇಳುವ ನೈತಿಕತೆ ಏಕೆ ಈಗ ಇಲ್ಲ?

Mr. Speaker : I am allowing.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಈಗ ಇದನ್ನು ಪ್ರತಿಷ್ಠೆಯ ಪ್ರಶ್ನೆಯಾಗಿ ಮಾಡಿಕೊಳ್ಳುವುದು ಬೇಡ. ಇನ್ನೂ ಅನೇಕ ಮಸೂದೆಗಳ ಬಗ್ಗೆ ಚರ್ಚೆ ಮಾಡತಕ್ಕದ್ದು ಇದೆ. ಇನ್ನು 2-3 ದಿವಸಗಳಲ್ಲಿ ಇದೆಲ್ಲಾ ಮುಗಿಯಬೇಕಾಗಿದೆ. ಅಪ್ರೋಪ್ರಿಯೇಷನ್ ಬಿಲ್ಲನ್ನು ಸಹ ಮಂಡನೆ ಮಾಡಿ ಅಪ್ರೂವ್ ಮಾಡಬೇಕಾಗಿದೆ. ಆದ್ದರಿಂದ ನಾನೇನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಎಂದರೆ, ಈಗ ಸರ್ಕಾರದವರು ಈ ಸರ್ಕುಲರ್ ಕಳುಹಿಸುವ ಮುಂಚೆ ಅವರ ಹತ್ತಿರ ಎಲ್ಲವೂ ಸಹಿತ ಮಾಹಿತಿ ಇರುತ್ತದೆ. ಮತ್ತೆ ನಮ್ಮ ಪುಸ್ತಕದ ನಿಯಮಾವಳಿಗಳ ಪ್ರಕಾರವಾಗಿ ನಿಲುವಳಿ ಸೂಚನೆ ಕಳುಹಿಸಿದ ತಕ್ಷಣವೇ ಒಂದು ಗಂಟೆ ಮುಂಚಿತವಾಗಿ ಸಂಬಂಧಪಟ್ಟ ಮಾನ್ಯ ಮುಖ್ಯಮಂತ್ರಿಗಳಿಗೆ ಅಥವಾ ಮಾನ್ಯ ಗೃಹಮಂತ್ರಿಗಳಿಗೆ, ಆಯಾಯ ಇಲಾಖಾ ಮಂತ್ರಿಗಳಿಗೆ ಹೋಗಬೇಕಾಗುತ್ತದೆ. ಆದರಿಂದಾಗಿ ಇದಕ್ಕೇನು ಹೆಚ್ಚಿನ ಮಾಹಿತಿ ಬೇರೆ ರಾಜ್ಯಗಳಿಂದ ಅಥವಾ ಬೇರೆ ಜಿಲ್ಲೆಗಳಿಂದ ಅಥವಾ ದೆಹಲಿಯಿಂದ ತರಿಸಬೇಕು ಎನ್ನತಕ್ಕಂತಹ ಪ್ರಶ್ನೆ ಬರುವುದಿಲ್ಲ. ಒಂದು ಅರ್ಧ ಗಂಟೆ ಪ್ರಿಲಿಮಿನರಿ ಸಬ್ಮಿಷನ್‌ಗೆ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮತ್ತು ನಮಗೆ ಅವಕಾಶ ಕೊಟ್ಟರೆ ಆರ್ಎಸ್ಎಸ್ ಮತ್ತು ಡಿಎಸ್ಎಸ್ ವಿಚಾರದಲ್ಲಿ ನಾವು ಕೆಲವು ವಿಚಾರಗಳನ್ನು ಹೇಳಬಹುದು. ಆದಾದನಂತರ ಅವರು ಉತ್ತರ ಕೊಡುವುದನ್ನು ತಡ ಮಾಡಲಿ.

ಅಧ್ಯಕ್ಷರು : ನಾನು ಅಲೋ ಮಾಡುತ್ತೇನೆಂದು ಹೇಳುತ್ತಿದ್ದೇನಲ್ಲಾ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಲೋ ಮಾಡಿ.

ಅಧ್ಯಕ್ಷರು : ಲಂಚ್ ಅವರ್ ಆದಮೇಲೆ ಅಲೋ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಈಗ ಮಾಡಿ. ಈಗಲೇ ನೀವು ಅಲೋ ಮಾಡಬೇಕು.

ಅಧ್ಯಕ್ಷರು : ನಾನು ಲಂಚ್ ಅವರ್ ಆದನಂತರ ಎಂದು ಹೇಳಿದ್ದೇನಲ್ಲಾ. ಸರ್ಕಾರದವರು ಏನು ಹೇಳುತ್ತಾರೆ? ಕೆಲವು ಮಾಹಿತಿಗಳನ್ನು ಸಂಗ್ರಹಣೆ ಮಾಡಬೇಕು, ಎರಡು ಗಂಟೆಗಳ ಕಾಲ ಸಮಯ ಕೊಡಿ ಎಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ : ಪಾರದರ್ಶಕ ಸರ್ಕಾರ ಎಂದು ಹೇಳುತ್ತಿದೆ.

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ : ಪಾರದರ್ಶಕದ ವಿಚಾರವೆಲ್ಲಾ ಇಡೀ ಸಮಾಜಕ್ಕೆ,-ಪಾರದರ್ಶಕವಾಗಿರಲಿ, ದೇಶದಲ್ಲಿ ಪಾರದರ್ಶಕವಾಗಿರಲಿ. ಅದರಲ್ಲಿ ಇವರು ಸಂಗ್ರಹಣೆ ಮಾಡುವುದು ಏನು ಇದೆ? ಅದರ ಉದ್ದೇಶ ಏನು? ಉದ್ದೇಶ ಪೂರ್ವಕವಾಗಿ ಯಾವುದೋ ಸಂಘಟನೆ ಮೇಲೆ ಸವಾರಿ ಮಾಡುವಂತಹ ಕ್ರಮ ಏನಿದೆ ಇದು ಖಂಡಿತ ಒಳ್ಳೆಯದಲ್ಲ.

ಅಧ್ಯಕ್ಷರು : ನೀವು ಹತ್ತು ಗಂಟೆಗೆ ನಿಲುವಳಿ ಸೂಚನೆ ಕಳಿಹಿಸಿದ್ದೀರಿ. ಹನ್ನೊಂದು ಗಂಟೆಯೊಳಗೆ ಹೇಗೆ ಮಾಹಿತಿ ತರಿಸುವುದು?

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ : ತಾವು ಪ್ರಿಲಿಮಿನರಿ ಸಬ್ಮಿಷನ್‌ಗೆ ಅವಕಾಶ ಕೊಡಿ. ಆ ನಂತರ ಅವರು ಮಾಹಿತಿ ಕಲೆಕ್ಷನ್ ಮಾಡಲಿ.

ಶ್ರೀ ಎಸ್. ಸುರೇಶ್‌ಕುಮಾರ್ : ಇನ್ನೊಂದು ಸಲ ನಾನು ಮಾನ್ಯ ಮುಖ್ಯಮಂತ್ರಿಗಳನ್ನು, ಮಾನ್ಯ ಗೃಹಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇದು ಪ್ರಿವೀಜ್ ಪ್ರಶ್ನೆ ಅಲ್ಲ. ಡಿಬೇಟ್ ಪ್ರಶ್ನೆ ಅಲ್ಲ. ಈ ಸರ್ಕುಲರ್ ಪ್ಯೂರ್ ಅಡ್ ಸಿಂಪಲ್; It is playing mischeif. ದಯವಿಟ್ಟು ಅದನ್ನು ಒಪ್ಪಿಕೊಳ್ಳಿ. ದಯವಿಟ್ಟು ಈ ಸರ್ಕುಲರ್ ಅನ್ನು ಸರ್ಕಾರ ವಿತ್‌ಡ್ರಾ ಮಾಡಿ. ಅಲ್ಲಿಗೆ ಈ ವಿಚಾರ ಮುಗಿದೇ ಹೋಯಿತು. ದಯವಿಟ್ಟು ವಿತ್‌ಡ್ರಾ ಮಾಡಿ.

+ ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಸಭಾಧ್ಯಕ್ಷರೆ, ಈಗ ಸ್ವಾತಂತ್ರ್ಯ ದಿನಾಚರಣೆಗಳಲ್ಲಿ ಇಂತಹ ಒಂದು ಕಾನೂನು ಭಗ್ನವಾದಂತಹ ಕೃತ್ಯಗಳನ್ನು ತಡೆಗಟ್ಟುವುದಕ್ಕೆ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವುದು ಸರ್ಕಾರದ ಆದ್ಯ ಕರ್ತವ್ಯ ಇದೆ, ಅದು ಇಲ್ಲ ಎಂದು ನಾವು ಹೇಳುವುದಿಲ್ಲ. ನಮ್ಮ ಸರ್ಕಾರ ಇದ್ದಾಗಲೂ ಕೆಲವು ಜ್ಞಾಪನಾ ಪತ್ರಗಳನ್ನು ಹೊರಡಿಸಿ ಅಂತಹ ಕೆಲಸಗಳನ್ನು ಮಾಡಿರತಕ್ಕದ್ದು ನಿಜ. ಆದರೆ ಇಲ್ಲಿ ಏನು ಹೇಳಿದ್ದಾರೆ? ನನಗೆ ಅನ್ನಿಸುತ್ತಿದೆ. ಅಶಾಂತಿ ಇವೇ ಮುಂತಾದ ಕಾರಣಗಳಿಂದ ಜನ ಸಾಮಾನ್ಯರಲ್ಲಿ ಅಸಮಾಧಾನ ಇರಬಹುದು. ಈ ಸಂದರ್ಭವನ್ನು ಸಮಾಜಘಾತಕ ಶಕ್ತಿಗಳು ದುರುಪಯೋಗಪಡಿಸಿಕೊಂಡು ಕಾನೂನು ಮತ್ತು ಸುವ್ಯವಸ್ಥೆಯಲ್ಲಿ ಭಂಗ ಮಾಡುವ ಶಂಕೆ ಇರುತ್ತದೆ. ಇಷ್ಟು ಸಾಕಾಗಿತ್ತು; ಈ ಹಿನ್ನೆಲೆಯಲ್ಲಿ ಮುಂಚಿತವಾಗಿ ಅಧಿಕ ಮಾಹಿತಿಯನ್ನು ಪಡೆದು ಸಾಕಾದಷ್ಟು ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳುವುದು ಅತಿ ಅವಶ್ಯಕವಾಗುತ್ತದೆ ಎಂದಿದ್ದರೆ ಸಾಕಾಗುತ್ತಿತ್ತು. ಈಗ ಏನಾಗಿದೆ? ಸಮಾಜಘಾತುಕ ಶಕ್ತಿಗಳು ಎಂದು ಹೇಳಿದ್ದೀರಿ. ಇಲ್ಲಿ ಬೆಟ್ಟು ಮಾಡಿ, ಎಲ್.ಟಿ.ಟಿ.ಇ. ಇರಬಹುದು, ಜೆ.ಕೆ.ಎಲ್.ಎಫ್. ಇರಬಹುದು, ಪಿ.ಡಬ್ಲ್ಯುಜಿ ಇರಬಹುದು, ಮುಸ್ಲಿಂ ಲೀಗ್ ಇರಬಹುದು, ಆರ್.ಎಸ್.ಎಸ್ ಇರಬಹುದು, ದಲಿತ ಸಂಘರ್ಷ ಸಮಿತಿ ಇರಬಹುದು. ಈ

ಎಲ್ಲಾ ಸಂಘ ಸಂಸ್ಥೆಗಳು ಕೆಲವು ಸಾಮಾಜಿಕ ಕಳಕಳಿಯನ್ನು ಇಟ್ಟುಕೊಂಡಿರತಕ್ಕಂತಹ ಸಂಸ್ಥೆಗಳಾಗಿವೆ, ಅವು ಅವರವರ ಹಕ್ಕುಗಳಿಗೋಸ್ಕರ, ಅವರವರ ಒಂದು ನ್ಯಾಯಕ್ಕೋಸ್ಕರ ಹೋರಾಟ ಮಾಡತಕ್ಕಂಥ ಸಂಸ್ಥೆಗಳು ಆಗಿವೆ. ಇವುಗಳನ್ನು ಸಮಾಜಘಾತಕ ಶಕ್ತಿಗಳು ಎಂದು ಕರೆಯತಕ್ಕದ್ದು ಸರಿಯಲ್ಲ. ಸರ್ಕಾರ ನೇರವಾಗಿ ಇವುಗಳ ಮೇಲೆ ಒಂದು ಧಾಳಿಯನ್ನು ಮಾಡಿರತಕ್ಕದ್ದು ಕಾನೂನುಬಾಹಿರವಾಗಿದೆ. ಇವತ್ತು ಅರ್ಧ ಗಂಟೆಯ ಚರ್ಚೆಯೂ ಬೇಕಾಗಿಲ್ಲ, ಮುಕ್ಕಾಲು ಗಂಟೆಯ ಚರ್ಚೆಯೂ ಬೇಕಾಗಿಲ್ಲ. ಈ ಒಂದು ಶಬ್ದಗಳನ್ನು ತೆಗೆದುಹಾಕಿ ಪರಿಶುದ್ಧವಾದಂತಹ ಒಂದು ಜ್ಞಾಪನಾ ಪತ್ರವನ್ನು ಸರ್ಕಾರದವರು ನಾವು ಹೊರಡಿಸುತ್ತೇವೆ ಎಂದು ಹೇಳಿ ಬಿಟ್ಟರೆ ಏನೂ ಚರ್ಚೆ ಬೇಕಾಗಿಲ್ಲ. ದಯವಿಟ್ಟು ಇದನ್ನು ಮಾಡಬೇಕು. ದಲಿತ ಸಂಘ ಸಮಿತಿಗಳು ಯಾವ ಸಮಾಜಘಾತಕ ಕೆಲಸವನ್ನು ಮಾಡಿದ್ದಾರೆ ಎಂಬುದನ್ನು ತಾವೇ ಹೇಳಿ. ಅವರು ನ್ಯಾಯಕ್ಕೋಸ್ಕರ ಹೋರಾಟ ಮಾಡುತ್ತಾರೆ. ಅವರನ್ನು ಸಮಾಜಘಾತುಕ ಶಕ್ತಿಗಳು ಎಂದು ಹೇಳಿದರೆ ಆ ವರ್ಗದ ಮೇಲೆ ಅದು ಪ್ರತಿಬಿಂಬಿಸುತ್ತದೆ. ಮುಸ್ಲಿಂ ಲೀಗ್ ಇರಬಹುದು, ಆರ್‌ಎಸ್‌ಎಸ್ ಇರಬಹುದು. ಬೇರೆ ಬೇರೆ ಸಂದರ್ಭಗಳಲ್ಲಿ ನೀವು ಟೀಕೆ ಮಾಡಬಹುದು. ಆದರೆ ಇಂತಹ ಒಂದು ಸಂದರ್ಭದಲ್ಲಿ ಅವರನ್ನು ಬೆಟ್ಟು ಮಾಡಿ ತೋರಿಸತಕ್ಕಂಥದ್ದು ನಿಜವಾಗಿ ಸರಿಯಲ್ಲ. ಇಲ್ಲಿ ಮಂತ್ರಿಗಳೂ ಇದ್ದಾರೆ. ಆದ್ದರಿಂದ ದಯಮಾಡಿ ಇದನ್ನು ವಿತ್‌ಡ್ರಾ ಮಾಡಿಬಿಡಿ. ಒಂದು ರಿವೈಸ್ಡ್ ನೋಟಿಫಿಕೇಷನ್ ಇಶ್ಯೂ ಮಾಡಿದರೆ ಸಾಕು.

ಶ್ರೀ ಡಿ.ವಿ. ಸದಾನಂದಗೌಡ : ಇದು ಏನಾಗಿದೆ ಎಂದರೆ..

(ಗೊಂದಲ)

ಶ್ರೀ ಸಿ. ಚೆನ್ನಿಗಪ್ಪ : ಸ್ವಲ್ಪ ಬದಲಾವಣೆ ಮಾಡಿಕೊಂಡರೆ ಸಾಕು, ಅದರಲ್ಲಿ ಇರುವಂತಹ ಸಂಘ ಸಂಸ್ಥೆಗಳು ಎಂದರೆ ಹೆಸರು ಇರುವುದ್ದು ಬಿಡಬೇಕು ಅಷ್ಟೇ.

ಶ್ರೀ ಡಿ.ವಿ. ಸದಾನಂದಗೌಡ : ಇದನ್ನು ಸೂಕ್ಷ್ಮವಾಗಿ ವಿಮರ್ಶೆ ಮಾಡುವಂತಹ ಅವಶ್ಯಕತೆ ಇದೆ. ನಾನು ತಮಗೆ ಇಷ್ಟೇ ಹೇಳುತ್ತೇನೆ. ಈಗ ಚರ್ಚೆ ಮಾಡಬೇಕು, ಅದಕ್ಕೆ ಉತ್ತರ ಕೊಡಲು ನಾವು ಸಮರ್ಥರು ಇದ್ದೇವೆ ಎಂದು ಹೇಳುತ್ತಾರಲ್ಲಾ ಅವರು, ನಮಗೆ ಮೊದಲು ಹೇಳಲು ಅವಕಾಶ ಕೊಡಿ.

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ : ನಾವು ಪ್ರಿಲಿಮಿನರಿ ಸಬ್ಮಿಷನ್ ಮಾಡುವುದಕ್ಕೆ ಅವಕಾಶ ಕೊಡಿ. ಅರ್ಧ ಗಂಟೆ, ಒಂದು ಗಂಟೆ, ಸಬ್ಮಿಷನ್ ಮಾಡುತ್ತೇವೆ, ಅವಕಾಶ ಕೊಡಿ. ಅವರು ಸರ್ಕುಲರ್ ಕೊಡಲಿಕ್ಕೆ ಸಮರ್ಥರು ಇದ್ದಾರೆ. ಅದೇ ರೀತಿ ಉತ್ತರ ಕೊಡಲೂ ಸಹ ಸಮರ್ಥರು ಇದ್ದಾರೆ, ಇಲ್ಲ ಎಂದು ನಾನು ಹೇಳುತ್ತಿಲ್ಲ. ಆದರೆ ಈ ರೀತಿ ಪ್ರಾಥಮಿಕ ಹಂತದಲ್ಲೇ ಎದ್ದು ನಿಂತು ಈಗ ಬೇಡ, ಮತ್ತೆ ಎಂದು ಹೇಳುವುದರಲ್ಲಿ ಅರ್ಥ ಏನು?

ಅಧ್ಯಕ್ಷರು : ಅವರು ಬೇರೆ ಏನೂ ಹೇಳಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ : ಆ ಪಾಯಿಂಟ್ಸ್‌ಗಳನ್ನು ರೈಸ್ ಮಾಡಲು ಅವಕಾಶ ಇಲ್ಲ.

(ಗೊಂದಲ)

ಅಧ್ಯಕ್ಷರು : ಅವರು ಬೇಡ ಎಂದು ಹೇಳಿಲ್ಲ. ಅವರು ಬೇಡ ಎಂದು ಹೇಳಿದ್ದರೆ ನೀವು ಅಬ್ಜೆಕ್ಷನ್ ಮಾಡಬೇಕಿತ್ತು. They are ready to reply. Let us take it up after lunch.

ಶ್ರೀ ಆರಗ ಜ್ಞಾನೇಂದ್ರ : ಜ್ಞಾಪನಾ ಪತ್ರದಲ್ಲಿ ಇರುವಂತಹ ಪ್ರಿಯಾಂಬಲ್ ಅನ್ನು ತಾವು ಪರಾಂಬರಿಸಬೇಕು. ಇದರಲ್ಲಿ ಬೆಳೆ ಹಾನಿಯಿಂದಾಗಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇವೆಲ್ಲಾ ಕಾರಣದಿಂದ ಜನರಲ್ಲಿ ಅಸಮಾಧಾನ ಇದೆ ಎಂದು ಹೇಳಿದ್ದಾರೆ. ಪ್ರಿಯಾಂಬಲ್ ಅನ್ನು ಸರ್ಕಾರದ ಪರವಾಗಿಯೇ ಬರೆದಿದ್ದಾರೆ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ : ಅಸಮಾಧಾನ ಇರಬಹುದು ಎಂದು ಬರೆಯುತ್ತಾರೆ.

(ಗೊಂದಲ)

ಅಧ್ಯಕ್ಷರು : ಎರಡು ಗಂಟೆಯಲ್ಲಿ ಉತ್ತರ ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ : ರೂಲಿಂಗ್ ಪಾರ್ಟಿಯವರೇ ಈ ಸರ್ಕುಲರ್ ಅನ್ನು ವಿರೋಧ ಮಾಡಬೇಕಿತ್ತು. ಇಂತಹ ಅಧಿಕಾರಿಗಳೂ ಇದ್ದಾರಾ?

ಅಧ್ಯಕ್ಷರು : ಆಯಿತಲ್ಲಾ, ಎಲ್ಲವನ್ನೂ ಹೇಳಿದ್ದೀರಿ.

ಶ್ರೀ ಆರಗ ಜ್ಞಾನೇಂದ್ರ : ಅಗತ್ಯ ವಸ್ತುಗಳ ಬೆಲೆ ಏರಿಕೆ, ವಿದ್ಯುಚ್ಛಕ್ತಿ ದರ, ಬಸ್ ಪ್ರಯಾಣ ದರ ಏರಿಕೆ ಇವೇ ಮುಂತಾದ ಕಾರಣಗಳಿಂದ ಜನ ಸಾಮಾನ್ಯರಲ್ಲಿ ಅಸಮಾಧಾನ ಇರಬಹುದು ಎಂದು ಹೇಳಿದ್ದಾರೆ.

ಅಧ್ಯಕ್ಷರು : ನಾನು ಹೇಳುವುದನ್ನು ಕೇಳಿ.

ಶ್ರೀ ಆರಗ ಜ್ಞಾನೇಂದ್ರ : ಈ ರೀತಿ ಸರ್ಕಾರದ ವಿರುದ್ಧವೇ ಒಂದು ಸುತ್ತೋಲೆಯನ್ನು ಕಳುಹಿಸಿದ್ದಾರೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಬೇಕಾದರೆ ಅವರು ರೈಸ್ ಮಾಡಲಿ, ನಾವು ಉತ್ತರ ಕೊಡೋಣ, ಬೇಡ ಎಂದು ಹೇಳಲಿಲ್ಲ. ನಾವು ಹೇಳಿದ್ದೇವೆ. ಇದು ಮುಗಿದಮೇಲೆ ತೆಗೆದುಕೊಳ್ಳೋಣ ಬೇಡ ಎಂದು ಯಾರೂ ಹೇಳುವುದಿಲ್ಲ.

11. 30 ಎ.ಎಂ.

(ಗೊಂದಲ)

ಅಧ್ಯಕ್ಷರು : ನೀವೆಲ್ಲಾ ಈ ರೀತಿ ಮಾಡಿದರೆ I don'r like it, I am sorry. ಜಗದೀಶ್ ಶೆಟ್ಟರ್‌ರವರೆ, ಸದಾನಂದಗೌಡರೆ, ಸ್ವಲ್ಪ ತಡೆಯಿರಿ.

(ಗೊಂದಲ)

ಅಧ್ಯಕ್ಷರು : ಈಗ ಯಾರು ಏನು ಮಾತನಾಡುತ್ತಿದ್ದಾರೆಂದು ಗೊತ್ತಾಗುತ್ತಿಲ್ಲ. 20, 30 ಜನರು ಒಟ್ಟಿಗೆ ಮಾತನಾಡುತ್ತಿದ್ದಾರೆ. ಅವರೆಲ್ಲಾ ಹೇಳಿದ್ದನ್ನೇ ಹೇಳುತ್ತಿದ್ದಾರೆ. ನೀವು ರೆಕಾರ್ಡ್ ಮಾಡಬೇಡಿ; Don't take down.

(ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ದಾಖಲಿಸಲಿಲ್ಲ)

(ಗೊಂದಲ)

ಅಧ್ಯಕ್ಷರು : ಇಷ್ಟು ಹೊತ್ತು ತಾವು ಹೇಳಿದ್ದನ್ನೆಲ್ಲಾ ನಾನು ಕೇಳಿದ್ದೇನೆ. ಈಗ ನಾನು ಹೇಳುವುದನ್ನು ನೀವು ಕೇಳಬೇಕು. ಅಧ್ಯಕ್ಷರು ಮಾತನಾಡುವುದಕ್ಕೆ ತಾವು ಆಸ್ಪದ ಕೊಡಬೇಕು. ಈಗ ನಮ್ಮ ಮುಂದೆ ಇರುವ ಪ್ರಶ್ನೆ ಇಷ್ಟೆ, ಸರ್ಕಾರದವರು ಒಪ್ಪಿಕೊಂಡಿದ್ದಾರೆ, ಚರ್ಚೆಯಾಗಲಿ, ಉತ್ತರಿಸುವುದಕ್ಕೆ ತಯಾರಿದ್ದೇವೆಂದು ಅವರು ಹೇಳಿದ್ದಾರೆ. ಚರ್ಚೆಯನ್ನು ಈಗ ತೆಗೆದುಕೊಳ್ಳಬೇಕೇ ಅಥವಾ ಭೋಜನ ವಿರಾಮದ ನಂತರ ತೆಗೆದುಕೊಳ್ಳಬೇಕೇ ಎಂಬುದು ಈಗ ನಮ್ಮ ಮುಂದೆ ಪೆಂಡಿಂಗ್ ಇರುವ ವಿಷಯ. There is no other issue, ಅಲ್ಲವೇ? ಅದಕ್ಕೆ ನಾನು ರೂಲಿಂಗ್ ಕೊಡುತ್ತೇನೆ.

(ಸದನದ ಬಾವಿಯಲ್ಲಿ ನಿಂತು ಬಿಜೆಪಿ ಸದಸ್ಯರು ಸರ್ಕಾರದ ವಿರುದ್ಧ ಧಿಕ್ಕಾರ ಕೂಗುತ್ತಿದ್ದರು)

Mr. Speaker : No. No. This is not the way of behaving. No. I am very sorry. ನಾನು ರೂಲಿಂಗ್ ಸಹ ಕೊಡಬಾರದೇ? ನೀವು ಡಿಕ್ಟೇಟ್ ಮಾಡಿದರೆ ನಾನು ಕೇಳಬೇಕೆ? ಅವರು ಡಿಬೇಟ್ ಮಾಡುವುದಕ್ಕೆ ತಯಾರಿದ್ದಾರೆ. ಚರ್ಚೆ ಮಾಡುವುದಕ್ಕೆ ಸಮಯ ಈಗಲೇ ಅಥವಾ ಅನಂತರವೇ ಎಂಬುದು ಅಷ್ಟೆ ತಾನೇ ನಮ್ಮ ಮುಂದಿರುವ ವಿಷಯ. We are ready to take up the issue.

(ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಯಾವುದನ್ನೂ ದಾಖಲಿಸಲಿಲ್ಲ)

ಅಧ್ಯಕ್ಷರು : ಈಗ ಶೇಕಡ 75 ಭಾಗದಷ್ಟು ಸದಸ್ಯರು ಒಂದು ಕಡೆ ಇದ್ದಾರೆ. ಆದರೂ ಸಹ ನೀವು, ಈ ಕಡೆಯವರು ಈ ರೀತಿ ಅಡ್ಡಿಪಡಿಸುವುದು ಅಷ್ಟೊಂದು ಸರಿಯೆನಿಸುವುದಿಲ್ಲ. It is unfair. ಶೇಕಡ 75 ಭಾಗದಷ್ಟು ಸದಸ್ಯರು ಒಂದು ಕಡೆ ಇದ್ದಾರೆ. ಶೇಕಡ 75 ಭಾಗದಷ್ಟಿರುವ ನೀವು ಈ ರೀತಿ ಮಾಡುವುದು It is unfair.

(ಗೊಂದಲ)

Mr. Speaker : No. it is unfair. ಇಂತಹ ಸಮಯ ಬಂದಾಗ I will take the sense of the House. ಅಷ್ಟೆ, ಚರ್ಚೆಯನ್ನು ಈಗ ತೆಗೆದುಕೊಳ್ಳಬೇಕೇ ಅಥವಾ ಆನಂತರ ತೆಗೆದುಕೊಳ್ಳಬೇಕೆ. after lunch hour?

I have taken the sense of the House.

ರೂಲಿಂಗ್ ಕೊಡುತ್ತೇನೆಂದರೆ ಬೇಡ ಅಂತಾರೆ. ಇನ್ನೇನು ಮಾಡ್ಬೇಕು ಹೇಳಿ?

(ಗೊಂದಲ)

ಸ್ವಾಮಿ, ನೀವೂ-ಅವರೂ ಕೇಳದಿರುವಾಗ my duty is to take the sense of the House. ಅರ್ಥ ಆಯ್ತೆ? ಸಭೆ ಅಭಿಪ್ರಾಯ ಏನಿದೆ, ಇದನ್ನು ನಾನು ತೆಗೆದುಕೊಳ್ಳುತ್ತೇನೆ. ನಾನು ರೂಲಿಂಗ್ ಕೊಡುವುದಕ್ಕೂ ನೀವು ಬಿಡುವುದಿಲ್ಲ. ಹೌಸ್ ಸೆನ್ಸ್ ತೆಗೆದುಕೊಳ್ಳುವುದಕ್ಕೂ ಬಿಡುವುದಿಲ್ಲ. ಇನ್ಯಾವುದು ನೀವು ಮಾಡೋದು? ಅಲ್ಲಾ ಸ್ವಾಮಿ, 75 ಭಾಗ ಒಂದು ಕಡೆ ಇದ್ದಾರೆ, ನೀವು ಒಂದು ಕಡೆ ಇದ್ದೀರಿ. No. No. I am very sorry.

(ಗೊಂದಲ)

ಅಧ್ಯಕ್ಷರು : ನನಗೆ ಮಾತನಾಡಲು ಸಮಯ ಕೊಡಿ. ಇದೇನಿದು? ನಾನು ಅಧ್ಯಕ್ಷನಾಗಿ ಎದ್ದು ನಿಂತಾಗ ನನಗೆ ಮಾತನಾಡಲು ಸಮಯ ಕೊಡದಿದ್ದರೆ ನಾನು ಏನು ಮಾಡಲಿ? ಹೇಳಿ.

ಈಗ ಒಂದು ಕೆಲಸ ಮಾಡೋಣ. ಸದನವನ್ನು ಈಗ ಹದಿನೈದು ನಿಮಿಷಗಳ ಕಾಲ ಅಡ್ಜರ್ನ್ ಮಾಡುತ್ತೇನೆ. ನಾಯಕರುಗಳೆಲ್ಲರೂ ಬನ್ನಿ, ಮಾತನಾಡೋಣ.

ಈಗ ಸದನವನ್ನು ಹದಿನೈದು ನಿಮಿಷಗಳ ಕಾಲ ಮುಂದಕ್ಕೆ ಹಾಕುತ್ತಿದ್ದೇನೆ.

(ಸದನವನ್ನು 11 ಗಂಟೆ 38 ನಿಮಿಷಕ್ಕೆ ಮುಂದೂಡಲ್ಪಟ್ಟು,
ಪುನಃ ಹದಿನೈದು ನಿಮಿಷಗಳ ನಂತರ ಸೇರಲು ನಿಶ್ಚಯಿಸಲಾಯಿತು)

(ಸದನವು ಮತ್ತೆ 12 ಗಂಟೆಗೆ ಪುನರ್ ಸಮಾವೇಶಗೊಂಡಿತು. ಸನ್ಮಾನ್ಯ ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪನವರು ಪೀಠವನ್ನಲಂಕರಿಸಿದರು)

(ಸದನದ ಬಾವಿಯಲ್ಲಿ ಬಿ.ಜೆ.ಪಿ. ಸದಸ್ಯರುಗಳು ಧರಣಿ ನಿರತರಾಗಿದ್ದರು)

ಅಧ್ಯಕ್ಷರು : ಈಗ ನಮ್ಮ ಕಛೇರಿಯಲ್ಲಿ ನಾನು ಎಲ್ಲಾ ಪಕ್ಷಗಳ ನಾಯಕರೊಡನೆ ಚರ್ಚೆ ಮಾಡಿದ ಮೇಲೆ. ಈ ವಿಷಯವನ್ನು ನಿಯಮ 69ರ ಅಡಿಯಲ್ಲಿ ಈಗಲೇ ಚರ್ಚೆಗೆ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಲಾಗಿದೆ. ಮಾನ್ಯ ಮಂತ್ರಿಗಳ ಉತ್ತರದ ಅವಧಿಯೂ ಸೇರಿದಂತೆ ಒಟ್ಟಾರೆ ಒಂದು ಗಂಟೆಯ ಕಾಲಾವಧಿಯೊಳಗೆ ಚರ್ಚೆ ಮುಗಿಸುವುದಕ್ಕೆ ತೀರ್ಮಾನ ಆಗಿದೆ. ಆದುದರಿಂದ ಧರಣಿನಿರತರು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಬೇಕು. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿ.

(ಧರಣಿನಿರತ ಬಿ.ಜೆ.ಪಿ. ಸದಸ್ಯರು ಅಧ್ಯಕ್ಷರ ಸೂಚನೆಯಂತೆ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಂಡರು)

2. ನಿಯಮ 69ರ ಮೇರೆಗೆ ಚರ್ಚೆ

ವಿಷಯ: ದಿನಾಂಕ 15-8-2002ರಂದು ಸ್ವಾತಂತ್ರ ದಿನಾಚರಣೆಯನ್ನು ಆಚರಿಸುವ ವಿಚಾರದಲ್ಲಿ ಸರ್ಕಾರದವರು ಹೊರಡಿಸಿರುವ 'ಜ್ಞಾಪನಾ ಪತ್ರ'ವನ್ನು ಹಿಂತೆಗೆದುಕೊಳ್ಳುವ ಬಗ್ಗೆ.

+**ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು)** : ಮಾನ್ಯ ಅಧ್ಯಕ್ಷರೆ, ನಾವೇನು ಈ ಒಂದು ಪ್ರಮುಖವಾದಂತಹ ವಿಚಾರದ ಬಗ್ಗೆ ಚರ್ಚಿಸಲು ಅವಕಾಶ ಕೋರಿ ನಿಲುವಳಿ ಸೂಚನೆಯನ್ನು ತಮಗೆ ಕೊಟ್ಟಿದ್ದೆವು ಆ ನಿಲುವಳಿ ಸೂಚನೆಯನ್ನು ತಾವು ರೂಲ್ 69 ಆಗಿ ಕನ್‌ವರ್ಟ್ ಮಾಡಿ ಅದರಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ.

ನಾನು ತಮಗೆ ಮೊಟ್ಟಮೊದಲನೆಯದಾಗಿ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಈಗಾಗಲೇ ಪ್ರಸ್ತಾಪ ಮಾಡಿದ ಪ್ರಕಾರ ಈ ಜ್ಞಾಪನಾ ಪತ್ರ ಏನಿದೆ, ಅದರಲ್ಲಿ ಕಂಟೆಂಟ್ಸ್ ಏನಿದೆ ಎನ್ನುವುದನ್ನು ನಾನು ಓದಿದ್ದೇನೆ. ಈ ಒಂದು ರಾಜ್ಯದ ಗುಪ್ತವಾರ್ತಾ ಇಲಾಖೆ, ಬಹುಶಃ ಇದು ಮಾನ್ಯ ಮುಖ್ಯಮಂತ್ರಿಗಳ ಕೈಕೆಳಗೆ ಕೆಲಸ ಮಾಡುವಂತಹ ಇಲಾಖೆ; ಮತ್ತು ಇದು ನನ್ನ ಮಾಹಿತಿ ಪ್ರಕಾರ, ಅದಕ್ಕೆ ಹೋಮ್ ಮಿನಿಸ್ಟರ್‌ರವರ ಜವಾಬ್ದಾರಿ ಕೂಡ ಇರುತ್ತದೆ. ಮುಖ್ಯವಾಗಿ ಈ ಗೃಹ ಇಲಾಖೆಯನ್ನು ನಿರ್ವಹಣೆ ಮಾಡುವವರು ಈ ಗುಪ್ತವಾರ್ತಾ ಇಲಾಖೆಯೊಂದಿಗೆ ಸಂಬಂಧ ಇಟ್ಟುಕೊಂಡು ಮಾನ್ಯ ಗೃಹ ಮಂತ್ರಿಗಳು ಮತ್ತು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬಾರದೇ ಇಂತಹ ಒಂದು ಜ್ಞಾಪನಾ ಪತ್ರವಾಗಲೀ, ಇಂತಹ ಮಹತ್ವದ ನೋಟಿಫಿಕೇಷನ್ ಆಗಲಿ ಬಹುಶಃ ಹೋಗಲಿಕ್ಕಿಲ್ಲ ಎಂಬುದು ನನ್ನ ಭಾವನೆ. ಇದೆಲ್ಲಾ ಪ್ರಮುಖವಾದುದು. ಯಾರು ಎಸ್‌ಪಿಗೆ, ಪೋಲೀಸ್ ಕಮೀಷನರ್‌ಗೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ